Date : 23.01.2026

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**– ಮುಂದುವರಿದ ಮುಖ್ಯ ವಿಚಾರಣೆ – ಅರ್ಜಿದಾರರ ಪರ ಶ್ರೀ ಸಿ.ಟಿ. ವಕೀಲರಿಂದ –**

ನಾನು ಈ ಕೇಸಿನಲ್ಲಿ 1 ನೇ ಅರ್ಜಿದಾರಳಿದ್ದು, 2 ನೇ ಅರ್ಜಿದಾರಳು ನನ್ನ ಸಹೋದರಿಯಿದ್ದು, ನನ್ನ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸರಿ ಇರುತ್ತವೆ.

ನನ್ನ ಸಾಕ್ಷಿಗೆ ಬೆಂಬಲಿತವಾಗಿ, 1 ನೇ ಎದುರುದಾರರು ದಿಃ 05.01.2022 ರಂದು ನಮಗೆ ನೀಡಿದ ಅವಾರ್ಡ ನೋಟೀಸ್ ನ ನಕಲು ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅದನ್ನು ನಿಪಿ–1 ಎಂದು, ದಿಃ 08.10.2021 ರಂದು 1 ನೇ ಎದುರುದಾರರು ಹೊರಡಿಸಿದ ಸಾಮಾನ್ಯ ಐತೀರ್ಪಿನ ನಕಲು ದೃಢೀಕೃತ ಪ್ರತಿ, ಅವಾರ್ಡ ತಃಖ್ತೆಯ ನಕಲು ದೃಢೀಕೃತ ಪ್ರತಿ ಮತ್ತು ಅರ್ಜಿಯಲ್ಲಿ ಕಾಣಿಸಿದ ನಮ್ಮ ಜಮೀನನ್ನು ಎದುರುದಾರರು ಭೂಸ್ವಾಧೀನ ಪಡಿಸಿಕೊಂಡ ಬಾಬ್ತು ನಮಗೆ ಪರಿಹಾರ ನೀಡಿದ ಬಗ್ಗೆ ತೋರಿಸಲು ಇರುವ ಒಂದು ಪುಟದ ರಿಜಿಸ್ಟರಿನ ನಕಲು ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–2 ರಿಂದ 4 ಎಂದು, ಅರ್ಜಿಯಲ್ಲಿ ಕಾಣಿಸಿದ ಆಸ್ತಿಯ ಬಗ್ಗೆ ಇರುವ ಒಂದು ಪಹಣಿ ಪ್ರತಿ ಮತ್ತು ದಿಃ 01.09.2018 ರಂದು ಹಿರಿಯೂರು ತಾಲ್ಲೂಕು ಐಮಂಗಲ ಗ್ರಾಮದ 1 ಆಸ್ತಿಯ ಬಗ್ಗೆ ನೊಂದಣಿ ಕ್ರಯಪತ್ರವಾಗಿದ್ದು, ಅದರ ನಕಲು ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–5 ಮತ್ತು 6 ಎಂದು ಗುರುತಿಸಲಾಯಿತು. ಹಿರಿಯೂರು ತಾಲ್ಲೂಕು ಉಪನೊಂದಣಾಧಿಕಾರಿಯವರು ಅವರ ವ್ಯಾಪ್ತಿಯಲ್ಲಿ ಬರುವ ಜಮೀನುಗಳ ಮೌಲ್ಯದ ದರಪಟ್ಟಿಯ 3 ನಕಲು ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–7 ರಿಂದ 9 ಎಂದು, ದಿಃ 07.04.2020 ರಂದು ಚಿತ್ರದುರ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳು ಐಮಂಗಲ ಗ್ರಾಮದ ಒಂದು ಆಸ್ತಿಯ ಬಗ್ಗೆ ಹೊರಡಿಸಿದ ಭೂಪರಿವರ್ತನೆ ಆದೇಶದ ಡೌನ್ ಲೋಡೆಡ್ ಪ್ರತಿ ಹಾಜರುಪಡಿಸಿದ್ದು, ಅದನ್ನು ನಿಪಿ–10 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ವಕೀಲರು ಕಾಲಾವಕಾಶ ಕೋರುತ್ತಿದ್ದು, ಕಾಲಾವಾಕಾಶ ನೀಡಿ ಮಂದುವರಿದ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

*ಓದಿ ಹೇಳಿ ಕೇಳಿ ಸರಿ ಇದೆ.*

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.